# ಅನ್ನ-ಹಸಿವು-ಬಡತನ

**ಡಾ. ಹೊನ್ನಪ್ಪ ಹೊನ್ನಪ್ಪನವರ**
ಕನ್ನಡ ಉಪನ್ಯಾಸಕರು
ಸರಕಾರಿ ಪ್ರಥಮ ದರ್ಜೆ ಮಹಾವಿದ್ಯಾಲಯ
ರಾಣೇಬೆನ್ನೂರು

ಇಡೀ ಜಗತ್ತನ್ನು ಹಸಿವು ಎಂಬ ಭೂತ ಕಿತ್ತು ತಿನ್ನುತ್ತಿದೆ. ಇಲ್ಲಿ ಹಸಿವಿನಿಂದ ಸತ್ತವರ ಸಂಖ್ಯೆಗೆ ಲೆಕ್ಕವಿಲ್ಲ. ಹಾಗೆಯೇ ಹಸಿವನ್ನು ಕುರಿತು ಬಂದ ಸಾಹಿತ್ಯವೂ ಅಪಾರ. ಅದರಿಂದ ಕನ್ನಡ ಸಾಹಿತ್ಯವೂ ಹೊರತಲ್ಲ. ಜನಪದ ಸಾಹಿತ್ಯದಿಂದ ಹಿಡಿದು ಸರ್ವಜ್ಞ, ಬೇಂದ್ರೆ ಸಾಹಿತ್ಯದಲ್ಲಿ ಅದನ್ನು ಸ್ಪಷ್ಟವಾಗಿ ಕಾಣುತ್ತೇವೆ. ಅದರಲ್ಲೂ ಶತ-ಶತಮಾನಗಳಿಂದ ಅನ್ನವೇ ಕಾಣದ ಜನರ ಬಗೆಗೆ ಪಡಿಮಿಡಿದ ಹಾಗೂ ಧ್ವನಿಯೆತ್ತಿದ ಸಾಹಿತ್ಯವೇ ದಲಿತ-ಬಂಡಾಯ. ಈ ಜಗತ್ತಿನಲ್ಲಿ ಹಸಿವು ಮನುಷ್ಯನನ್ನು ಯಾವ ಹಂತಕ್ಕೆ ದೂಡಿತೆನ್ನುವುದನ್ನು ಜನಪದರು ಮನಕರಗುವ ಹಾಗೆ ಚಿತ್ರಿಸಿದ್ದಾರೆ.

ಒಕ್ಕಲಗೇರ್ಯಾಗ ಮಳೆರಾಜ ಅವರು

ಮಕ್ಕಳ ಮಾರ್‍ಯಾರು, ಮಳೆರಾಜ।

ಮಕ್ಕಳ ಮಾರಿ ರೊಕ್ಕ ತಕ್ಕೊಂಡು

ಭತ್ತಂತ ತಿರುಗ್ಯಾರು ಮಳೆರಾಜ॥

ಈ ಪದ್ಯದಲ್ಲಿ ಹೇಳುವ ಹಾಗೆ ಹಸಿವನ್ನು ನೀಗಿಸುವ ಭತ್ತಕ್ಕಾಗಿ ತಮ್ಮ ಮಕ್ಕಳನ್ನೇ ಮಾರಿದ್ದಾರೆ ಎನ್ನುವಲ್ಲಿ ಹಸಿವು ಹುಟ್ಟಿಹಾಕುವ ಭಯಾನಕತೆ ವ್ಯಕ್ತವಾಗುತ್ತಿದೆ. ಹಿಂದೂ ಧರ್ಮ ಹೇಳುವ ಪ್ರಕಾರ :

ಹಸಿದು ತಿನ್ನುವುದು ಪ್ರಕೃತಿ

ಹಸಿಯದೇ ತಿನ್ನುವುದು ವಿಕೃತಿ

ಹಸಿದಿದ್ದರೂ ಕೂಡ ಇನ್ನೊಬ್ಬನಿಗೆ

ಕೊಡುವುದು ನಮ್ಮ ಸಂಸ್ಕೃತಿ.

ಮೇಲೆ ಹೇಳಿದ ನಮ್ಮ ಸಂಸ್ಕೃತಿಯನ್ನು ಪಾಲಿಸಿದ್ದರೆ, ಈ ದೇಶದಲ್ಲಿ ಹಸಿವೇ ಇರುತ್ತಿರಲಿಲ್ಲ. ಹಸಿಯದೆ ತಿನ್ನುವುದು ಹಾಗೂ ಅತಿಯಾಗಿ ಕೂಡಿಡುವ ವಿಕೃತಿಯವರಿಂದಲೇ ಇಲ್ಲಿ ಅನ್ನದ ಅಸಮಾನತೆ ನಿರ್ಮಾಣವಾಗಿದೆ. ಹನ್ನೆರಡನೆಯ ಶತಮಾನದ ವಚನಕಾರ ಜೇಡರ ದಾಸಿಮಯ್ಯ ತನ್ನ ಒಂದು ವಚನದಲ್ಲಿ ಹಸಿವಿನ ಬಗೆಗೆ ಹೀಗೆ ಹೇಳುತ್ತಾರೆ.

ಒಡಲುಗೊಂಡವ ಹಸಿವ

ಒಡಲಗೊಂಡವ ಹುಸಿವ

ಒಡಲಗೊಂಡವನೆಂದು ನೀನೊಮ್ಮೆ ಜರಿದು ನುಡಿಯದಿರಾ

ನೀನೆನ್ನಂತೊಮ್ಮೆ ಒಡಲಗೊಂಡು ನೋಡಾ ರಾಮನಾಥ॥

ಹೌದು, ಹಸಿವಿನಿಂದ ಬಳಲುವವರ ಬಗೆಗೆ ಈ ಸಮಾಜ ಪ್ರೀತಿ, ಕನಿಕರ ತೋರಿಸುವ ಬದಲು ಜರಿಯುತ್ತಲೇ ಬಂದಿದೆ. ಈ ರೀತಿ ಜರಿದವರನ್ನು ತರಾಟೆಗೆ ತೆಗೆದುಕೊಳ್ಳುವ ದಾಸಿಮಯ್ಯ ನೀವು ನಮ್ಮಂತೆ ಒಮ್ಮೆ ಹಸಿದಿದ್ದು ನೋಡಿ ಆಗ ಗೊತ್ತಾಗುತ್ತದೆ ಹಸಿವಿನ ನೋವುಗಳೇನು ಎನ್ನುವುದು ಎನ್ನುತ್ತಾನೆ.

ತ್ರಿಪದಿಯ ಬ್ರಹ್ಮ ಎಂದೇ ಕರೆಯಲ್ಪಡುವ ಸರ್ವಜ್ಞ ಅನ್ನ, ಹಸಿವು, ಬಡತನದ ಬಗೆಗೆ ಅರಿತವನು. ಅನ್ನದ ಮೌಲ್ಯ ತಿಳಿದು ಸರ್ವಜ್ಞ ಅನ್ನಕ್ಕೆ ದೈವತ್ವದ ಸ್ಥಾನ ಕೊಟ್ಟಿದ್ದಾನೆ. ಅದನ್ನು ಈ ವಚನದಲ್ಲಿ ನೋಡಬಹುದು.

ಅನ್ನದೇವರ ಮುಂದೆ ಇನ್ನು ದೇವರು ಉಂಟೆ

ಅನ್ನವುಂಟಾದರುಣಲುಂಟು ಜಗದೊಳಗೆ

ಅನ್ನವೇ ದೈವ ಸರ್ವಜ್ಞ।

ಎನ್ನುವುದಾಗಲಿ, ಮುಂದುವರೆದು

ಅನ್ನವನು ನೀಡುವುದು। ನನ್ನಿಯನು ನುಡಿಯುವುದು

ತನ್ನಂತೆ ಪರರ ಬಗೆಯುವುದು ಕೈಲಾಸಕ್ಕೆ

ಭಿನ್ನಾಣವಕ್ಕು ಸರ್ವಜ್ಞ।

ಸರ್ವಜ್ಞ ಹೇಳುವ ಹಾಗೆ ಅನ್ನ ದೇವರ ಮುಂದೆ ಇನ್ನು ಯಾವ ದೇವರು ಇಲ್ಲ. ಅನ್ನಕ್ಕಿಂತ ದೊಡ್ಡದಾದ ಸಮಸ್ಯೆ ಮತ್ತೊಂದಿಲ್ಲ ಎನಿಸುತ್ತದೆ. ಹಾಗಾಗಿಯೇ ಅನ್ನ ದೈವ ಎನ್ನುವುದರಲ್ಲಿ ಎರಡು ಮಾತಿಲ್ಲ. ದಾನಗಳಲ್ಲಿ ಅನ್ನ ದಾನವೇ ಶ್ರೇಷ್ಠ ಎನ್ನುವ ಕಾಲವೊಂದಿತ್ತು. ಅನ್ನ ನೀಡುವುದು ಕೈಲಾಸಕ್ಕೆ ಮಾರ್ಗ. ಅನ್ನ ನೀಡುವುದು ಒಂದು ಕಡೆ ಇರಲಿ, ಬಡವರ ಅನ್ನವನ್ನೇ ಕಿತ್ತುಕೊಳ್ಳುವ ದುಷ್ಟಮೃಗಗಳು ನಮ್ಮ ಮಧ್ಯದಲ್ಲಿವೆ.

ಗಾಂಧೀಜಿಯವರು 1924ರಲ್ಲಿ ಬೆಳಗಾವಿಯಲ್ಲಿ ನಡೆದ 39ನೆಯ ಅಖಿಲ ಭಾರತ ಕಾಂಗ್ರೆಸ್ ಸಮ್ಮೇಳನದಲ್ಲಿ ಹಸಿವಿನ ಬಗೆಗೆ ಹೇಳುವ ಮಾತು ಗಮನಾರ್ಹ. ಬಡತನ ತನ್ನಿಂದ ತಾನೇ ನೀಗದು ಬಡ-ಬಗ್ಗರಿಗೆ ಹಿಟ್ಟು ದೊರಕುವವರೆಗೂ ನಮಗೆ ಸ್ವರಾಜ್ಯ ಸಿಕ್ಕಂತೆ ಅಲ್ಲ ಎನ್ನುತ್ತಾರೆ. ಹಸಿವು ಇಲ್ಲವಾದಾಗಲೇ ಅಥವಾ ಅನ್ನದ ಸಮಸ್ಯೆ ಬಗೆಹರಿದಾಗಲೇ ನಮಗೆ ಸ್ವರಾಜ್ಯ ಸಿಕ್ಕ ಹಾಗೆ ಎನ್ನುವ ಗಾಂಧಿ ಅವರ ಮಾತಿನಲ್ಲಿ ಈ ದೇಶದ ಮುಖ್ಯ ಸಮಸ್ಯೆಗಳಲ್ಲಿ ಅನ್ನದ ಸಮಸ್ಯೆಯೂ ಒಂದು ಎನ್ನುವ ಸತ್ಯಾಂಶವಿದೆ.

ವರಕವಿ, ಶಬ್ಧಗಾರುಡಿಗ ಬೇಂದ್ರೆ ಅವರನ್ನು ಹಸಿವು ಅಪಾರವಾಗಿ ಕಾಡಿದೆ. ಹಾಗಾಗಿಯೇ ಒಂದು ಕಡೆ ಅನ್ನವಾಯಿತು ಚಿನ್ನ, ತಿನ್ನುವುದು ಏನನ್ನು ? ಎನ್ನುತ್ತಾರೆ. ತಮ್ಮದೇ ಒಂದು ಕವಿತೆಯಲ್ಲಿ ಬೇಂದ್ರೆ ಕವಿ ಹಸಿವಿನ ಬಗೆಗೆ ಹೀಗೆ ಬರೆಯುತ್ತಾರೆ.

ಈ ಭೂಮಿಗೆ ಎಲ್ಲ ದೇವರು ಬಂದ ಆದರೆ

ಪ್ರಾಣದೇವನು ನಿತ್ರಾಣನಾಗುತ ಅಂದ

ಅನ್ನದೇವರು ಮಾತ್ರ ಇನ್ನೂ ಬರಲಿಲ್ಲ,

ಇನ್ನೂ ಬರಲಿಲ್ಲ ಎನ್ನುತ್ತಾರೆ. ಅದೇ ಬೇಂದ್ರೆ ಮುಂದೆ ಶಿವನಿಗೆ ಹೇಳುವ ಮಾತುಗಳು ನಮ್ಮನ್ನು ಮೂಕವಿಸ್ಮಿತರನ್ನಾಗಿಸುತ್ತವೆ. ಅಯ್ಯೋ। ಶಿವನೆ ಎಂಥಾ ಅನಾಹುತ ಮಾಡಿಬಿಟ್ಟೆಯಪ್ಪಾ। ಹಸಿವೆಯನ್ನು ಹೊಟ್ಟೆಯೊಳಗಿಟ್ಟೆ। ಅನ್ನವನ್ನು ಹೊಟ್ಟೆಯೊಳಗಿಟ್ಟು, ಹಸಿವೆಯನ್ನು ಹೊರಗೆ ಇಡಬಾರದಿತ್ತೆ? ಎನ್ನುವ ಮಾತುಗಳು ಹಸಿವಿನ ತಲ್ಲಣಗಳೇನು, ಆತಂಕಗಳೇನು ಎನ್ನುವುದನ್ನು ಧ್ವನಿಸುತ್ತವೆ.

ಜಗತ್ತಿನಲ್ಲಿ ಹಸಿವು ಒಂದು ರೋಗವಿದ್ದ ಹಾಗೆ ಸು.820 ಮಿಲಿಯನ್‌ನಷ್ಟು ಜನ ಹಸಿವು ಎಂಬ ರೋಗದಿಂದ ಬಳಲುತ್ತಿದ್ದಾರೆ. 836ಮಿಲಿಯನ್‌ನಷ್ಟು ಜನ ಭಾರತದಲ್ಲಿ ದಿನವೊಂದಕ್ಕೆ 20 ರೂಪಾಯಿಗಿಂತ ಕಡಿಮೆ ಆಹಾರ ಸೇವಿಸುತ್ತಿದ್ದಾರೆ. ಹಾಗೆಯೇ 200 ಮಿಲಿಯನ್‌ನಷ್ಟು ಜನ ಹಸಿವು ಎಂಬ ರೋಗದಿಂದ ಸಾಯುತ್ತಿದ್ದಾರೆ. ಇದರಲ್ಲಿ ಅತಿ ಹೆಚ್ಚು ಜನ ದಲಿತರು, ಆದಿವಾಸಿಗಳು, ಹಿಂದುಳಿದವರು ಹಾಗೂ ಮಹಿಳೆಯರು ಎನ್ನುತ್ತಾರೆ ಖ್ಯಾತ ಅರ್ಥಶಾಸ್ತ್ರಜ್ಞ ಆ್ಯಡಂಸ್ಮಿತ್.

ಹಾಗಾದರೆ ಈಗ ಹೇಳಿ ಹಸಿದವರಿಗೆ ಅನ್ನ ಸಿಗಬೇಕೋ, ಬೇಡವೋ ಈ ಮೇಲಿನ ಎಲ್ಲಾ ಅಂಶಗಳನ್ನು ಗಮನಿಸಿದ ಮೇಲೆ ನನಗನಿಸುತ್ತದೆ. ಹಸಿದವರಿಗೆ ಮೊದಲು ಅನ್ನ ಸಿಗಬೇಕು. ಹಸಿವಿನಿಂದ ಸಾಯುವುದು ನಿಂತಾಗಲೇ ಈ ದೇಶದ ಸಾಂಸ್ಕೃತಿಕತೆಗೆ ಮೆರಗು

ಬರುವುದು. ಅದಕ್ಕಾಗಿಯೇ ಸರ್ಕಾರದ ಅನ್ನಭಾಗ್ಯ ಯೋಜನೆ ಸಾರ್ವಕಾಲಿಕ ಶ್ರೇಷ್ಠ ಕಾರ್ಯಕ್ರಮಗಳಲ್ಲಿ ಒಂದೆನಿಸುತ್ತದೆ. ಆದರೆ ಇಂತಹ ಶ್ರೇಷ್ಠ ಕೆಲಸವನ್ನು ಈ ನಾಡಿನ ಕೆಲ ವರ್ಗಗಳು ಒಪ್ಪಲು ತಯಾರಿಲ್ಲ. ಯಾಕೆಂದರೆ ಅವರಿಗೆ ಹಸಿವಿನ ಹಿಂದಿರುವ ನೋವು, ಆತಂಕಗಳ ಬಗೆಗೆ ಗೊತ್ತಿಲ್ಲವಲ್ಲ.

ಅನ್ನಭಾಗ್ಯದಂತ ಶ್ರೇಷ್ಠ ಯೋಜನೆ ಒಪ್ಪದಿರುವ ವರ್ಗಗಳ ಪ್ರತಿನಿಧಿಯಾಗಿ ಒಬ್ಬ ಶಾಸಕರು ವಿಧಾನಸಭೆಯಲ್ಲಿ ಇದರ ಬಗ್ಗೆ ವ್ಯಂಗ್ಯವಾಡುತ್ತಾರೆ. ಅವರು ಹೇಳುವ ವ್ಯಂಗ್ಯದ ಸಾಲುಗಳು ಹೀಗಿವೆ.

ಒಂದು ರೂ. ಕೆ.ಜಿ.ಅಕ್ಕಿಯಿರಲು

ವಾಸಕ್ಕೆ ಆಶ್ರಯ ಮನೆಯಿರಲು

ಅಗ್ಗದ ಮಧ್ಯ ಸಿಗಲು

ಕೂಲಿ ಕೆಲಸಕ್ಕೆ ಕಿಚ್ಚು ಹಚ್ಚೆಂದ ಸಿದ್ಧರಾಮಯ್ಯ॥

ಹೌದು, ನಾವು ಈ ಅಕ್ಕಿ ಸಿಕ್ಕ ನಂತರ ಕೂಲಿ ಕೆಲಸಕ್ಕೆ ಕಿಚ್ಚು ಹಚ್ಚಿದ್ದೇವೆ ಎಂಬುದು ನಿಮ್ಮ ಭಾವನೆ. ಆದರೆ ನೀವು ಕೂಲಿ ಮಾಡಿದ, ದನ ಮೇಯಿಸಿದ, ಶೌಚಾಲಯ ತೊಳೆದ, ಚರಂಡಿಗಳನ್ನು ಶುಚಿಗೊಳಿಸಿದ ಹಾಗೂ ಚಪ್ಪಲಿ ಹೊಲೆದ ಒಂದೇ ಒಂದು ಉದಾಹರಣೆಯನ್ನು ತೋರಿಸಿರಿ. ಅದಕ್ಕೆ ಸಿದ್ಧಲಿಂಗಯ್ಯನವರ ಮಾತು ಸರಿಯಾಗಿದೆ. ಪರಮಾತ್ಮನ ಹೆಸರೇಳಿ ಪರಮಾನ್ನ ಉಂಡವರಿಗೆ ಬೂಟು-ಮೆಟ್ಟು ಹೊಲೆದವರು ನನ್ನ ಜನಗಳು ಮುಖ್ಯಮಂತ್ರಿಗಳ ಈ ಯೋಜನೆಯಿಂದ ನಮಗೆ ನಿಮ್ಮಲ್ಲಿನ ಜೀತತನದಿಂದ ಹೊರಬರಲು ಒಂದು ಅವಕಾಶ ದೊರಕಿದೆ.

ಏನೇ ಆಗಲಿ ನೀವು ಉಳ್ಳವರು ಹಸಿದವರಿಗೆ ನೀಡಿದ್ದು, ಕೊಟ್ಟಿದ್ದು ಸುಳ್ಳು. ಈಗ ಯಾರೋ ಪುಣ್ಯಾತ್ಮ ಕೊಡುತ್ತಿದ್ದಾನೆ ಎಂದರೆ ಅದನ್ನು ಒಪ್ಪಿಕೊಳ್ಳುವ ಮನಸ್ಥಿತಿಯಲ್ಲಿ ನೀವಿಲ್ಲವಲ್ಲಾ? ಎನ್ನುವುದೇ ಖೇದದ ಸಂಗತಿ. ಪ್ರಾಣಿ, ಪಕ್ಷಿಗಳನ್ನಾದರೂ ನೀವು ನೋಡಿ ಕಲಿಯಬೇಕಾಗಿದೆ. ಕಾಗೆ, ಕೋಳಿ, ಒಂದಗಳು ಕಂಡರೆ ಇಡೀ ತನ್ನ ಬಳಗವನ್ನು ಕೂಗಿ ಕರೆಯುತ್ತದೆ. ಕಾಗೆ, ಕೋಳಿಗಳ ರೀತಿ ಉಣ್ಣದವನ ಇರುವು ಕಾಗೆಗೂ ಹೀನ ಎನ್ನುತ್ತಾನೆ ಸರ್ವಜ್ಞ ತನ್ನ ಒಂದು ವಚನದಲ್ಲಿ. ಇಷ್ಟೆಲ್ಲಾ ಆದ ನಂತರವೂ ಬಸವಣ್ಣ ಹೇಳಿದ ಹಾಗೇ ಶ್ರೀಮಂತರನ್ನು ಒಪ್ಪಿಸುವುದು ಕಷ್ಟಕರ.

ಹಾವು ತಿಂದವರ ನುಡಿಸಬಹುದು

ಗರ ಹೊಡೆದವರ ನುಡಿಸಬಹುದು

ಸಿರಿಗರ ಹೊಡೆದವರ ನುಡಿಸಲುಬಾರದು

ಬಡತನವೆಂಬ ಮಂತ್ರವಾದಿ ಬಳಿಗೆ ಹೋಗಲು

ಒಡನೆ ನುಡಿವರು ಕೂಡಲಸಂಗಮದೇವಾ॥

ಗ್ರಂಥ ಋಣ:

1) 1. ವಚನ ಸಾಹಿತ್ಯ ಸಂಗ್ರಹ : ಸಂ : ಸಂ ಶಿ. ಭೂಸನೂರಮಠ

2) ಕನ್ನಡ ಸಾಹಿತ್ಯ ಕೋಶ : ಡಾ ॥ ರಾಜಪ್ಪ ದಳವಾಯಿ

3) ಬಸವಯುಗದ ವಚನ ಮಹಾಸಂಪುಟ : ಸಂ : ಡಾ ॥ ಎಂ. ಎಂ. ಕಲಬುರ್ಗಿ

4) ಬಸವೋತ್ತರಯುಗದ ವಚನ ಮಹಾಸಂಪುಟ : ಸಂ : ಡಾ॥ ಎಂ. ಎಂ. ಕಲಬುರ್ಗಿ

5) ಕಿರಿಯರಿಗೆ ಕನ್ನಡ ಸಾಹಿತ್ಯ ಚರಿತ್ರೆ : ಲೇ : ಶ್ರೀ. ಆರ್. ಬಸವರಾಜ್